ಸಹಕಾರಿ ಸಂಘಗಳ ಮಾಹಿತಿ

1799(1384); ಶ್ರೀ ಎಂ.ಪಿ. ಅಪ್ಪಚ್ಚುರಂಜನ್ (ಮಡಿಕೇರಿ)

ಅ) ಕೊಡಗು ಜಿಲ್ಲೆಯಲ್ಲಿರುವ ಸಹಕಾರ ಸಂಘಗಳೆಷ್ಟು?

ಆ) ಸಂಘಗಳ ಲಾಭ ನಷ್ಟಗಳು ಎಷ್ಟು?

ಇ) ನಷ್ಟದಲ್ಲಿರುವ ಸಂಘವನ್ನು ಪುನಶ್ಚೇತನಗೊಳಿಸಲು ಸರ್ಕಾರದ ಕ್ರಮವೇನು?

ಶ್ರೀ ಹೆಚ್.ಸಿ. ಮಹದೇವ ಪ್ರಸಾದ್ (ಮಾನ್ಯ ಸಹಕಾರ ಸಚಿವರು)

ಅ) ಕೊಡಗು ಜಿಲ್ಲೆಯಲ್ಲಿ ಒಟ್ಟು 332 ಸಹಕಾರ ಸಂಘಗಳಿರುತ್ತವೆ.

ಆ) ಜಿಲ್ಲೆಯಲ್ಲಿ ಇರುವ ಸಹಕಾರ ಸಂಘಗಳಲ್ಲಿ ಒಟ್ಟು 230 ಸಂಘಗಳು ಲಾಭದಲ್ಲಿರುತ್ತದೆ, 96 ಸಂಘಗಳು ನಷ್ಟದಲ್ಲಿರುತ್ತದೆ ಹಾಗೂ ಲಾಭ–ನಷ್ಟವಿಲ್ಲದ 6 ಸಂಘಗಳಿರುತ್ತದೆ.

ಇ) ಸಹಕಾರ ಸಂಘಗಳು ಸ್ವಾಯತ್ತ ಸಂಸ್ಥೆಗಳಾಗಿದ್ದು, ಅವುಗಳ ಆರ್ಥಿಕವ್ಯವಹಾರದಲ್ಲಿ ಸರ್ಕಾರವು ಯಾವುದೇ ಹಸ್ತಕ್ಷೇಪ ಮಾಡುವುದಿಲ್ಲ. ನಷ್ಟವನ್ನು ಹೊಂದಿರುವ ಸಂಘಗಳು ವ್ಯಾಪಾರ ಅಭಿವೃದ್ಧಿ ಯೋಜನೆಯನ್ನು ಹಮ್ಮಿಕೊಂಡು ನಷ್ಟದಿಂದ ಹೊರಬರಲು ಕಾರ್ಯತಂತ್ರರೂಪಿಸಿಕೊಳ್ಳಬೇಕು.

ಆದಾಗ್ಯೂ ಆರ್ಥಿಕವಾಗಿ ದುರ್ಬಲವಾಗಿರುವ ಕೃಷಿ ವ್ಯವಹಾರ ಆಧಾರಿತ ಸಹಕಾರ ಸಂಘಗಳಾದ ಮಾರಾಟ, ಸಂಸ್ಕರಣ ಹಾಗೂ ಗ್ರಾಹಕ ಸಹಕಾರ ಸಂಘಗಳು ₹ 10 ಲಕ್ಷಕ್ಕಿಂತ ಕಡಿಮೆ ಕ್ರೋಢೀಕೃತ ನಷ್ಟವನ್ನು ಹೊಂದಿದ್ದಲ್ಲಿ, ಅಂತಹ ಸಹಕಾರ ಸಂಘಗಳನ್ನು ಪುನಶ್ಚೇತನಗೊಳಿಸಲು, ಸರ್ಕಾರವು ಕೆಲವು ಷರತ್ತಿಗೊಳಪಟ್ಟು, ದುಡಿಯುವ ಬಂಡವಾಳ ರೂಪದಲ್ಲಿ ಆರ್ಥಿಕ ನೆರವನ್ನು ನೀಡುವ ಯೋಜನೆಯು ಜಾರಿಯಲ್ಲಿರುತ್ತದೆ. ಮುಂದುವರೆದು ಸಹಕಾರ ಸಂಘಗಳು, ವಿಶೇಷವಾಗಿ ಟಿಎಪಿಸಿ ಎಂಎಸ್, ಪ್ಯಾಕ್ಸ್ ಹಾಗೂ ಪಿಕಾರ್ಡ್ ಬ್ಯಾಂಕುಗಳು ನಿವೇಶನವನ್ನು ಹೊಂದಿ, ವ್ಯಾಪಾರ ಅಭಿವೃದ್ಧಿ

ಪಡಿಸಲು ಕಟ್ಟಡಗಳು ಅವಶ್ಯಕತೆ ಇದ್ದಲ್ಲಿ, ಇವುಗಳ ನಿರ್ಮಾಣ/ದುರಸ್ತಿಗಾಗಿ ಸಹಾಯಧನವನ್ನು ಅನುದಾನದ ಲಭ್ಯತೆ ಆಧಾರದ ಮೇಲೆ ಒದಗಿಸಲಾಗುವುದು.

ಹದಗೆಟ್ಟಿರುವ ರಸ್ತೆಗಳು

1801(1480); ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರ್ ರಾವ್ ನಾಡಗೌಡ (ಮುದ್ದೇಬಿಹಾಳ)

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆ ರಸ್ತೆಗಳು ಹದಗೆಟ್ಟಿರುವುದು ಅದರಲ್ಲಿ ವಿಜಯಪುರ ಜಿಲ್ಲೆಯಲ್ಲಿ ತುಂಬಾ ರಸ್ತೆಗಳು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆ ರಸ್ತೆಗಳಿಗೆ ಎಷ್ಟು ಅನುದಾನವನ್ನು ಖರ್ಚು ಮಾಡಲಾಗಿದೆ; ವಿವರ ನೀಡುವುದು;

ಇ) ಈ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಗಳಿಗೆ ಖರ್ಚು ಮಾಡದೇ ಉಳಿದ ಅನುದಾನದ ಬಾಕಿ ಹಣ ಎಷ್ಟು; ವಿವರ ನೀಡುವುದು;

ಈ) ಹಾಗಿದ್ದಲ್ಲಿ, ಬಾಕಿ ಹಣ ಬಳಕೆ ಮಾಡದೇ ಇರುವುದಕ್ಕೆ ಸರ್ಕಾರದ ಮಾನದಂಡವೇನು: ವಿವರ ನೀಡುವುದು?

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ಕಳೆದ 3 ವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಪೈಕಿ ರಾಜ್ಯ ಹೆದ್ದಾರಿ ರಸ್ತೆಗಳು ಹದಗೆಟ್ಟಿರುವುದಿಲ್ಲ. ಆದರೆ ಜಿಲ್ಲಾ ಮುಖ್ಯ ರಸ್ತೆಗಳ ಪೈಕಿ ಕೆಲವು ರಸ್ತೆಗಳು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ವಿಜಯಪುರ ಜಿಲ್ಲೆಯ ರಸ್ತೆಗಳು ಸೇರಿದಂತೆ ಪೂರ್ಣ ಹಾಳಾಗಿರುವ ರಸ್ತೆಗಳನ್ನು ಸದರಿ ಆರ್ಥಿಕ ವರ್ಷಗಳಲ್ಲಿ ಲಭ್ಯವಾಗಿದ್ದ ಅನುದಾನದ ಮಿತಿಯಲ್ಲಿ ರಸ್ತೆ ನಿರ್ವಹಣೆ ಕಾಮಗಾರಿಗಳನ್ನು